ಕುನ್ನಂಕುಳಂನಲ್ಲಿ ವಾಸವಿರುವ ತನ್ನ ಸಂಬಂಧಿಕರ ಮನೆಯಿಂದ ಒಂದು ಚೀಲ ಬಿತ್ತನೆಯ ಬೀಜ ಕೊಳ್ಳುವುದಕ್ಕಾಗಿ ಹೊರಡಲು ತಯಾರಾದ ರಾಮನ್ ಕುಟ್ಟಿ ನಾಯರ್ ಹಿಂತಿರುಗಿ ನೋಡುತ್ತಾ ಹೇಳಿದರು, ''ನಾನು ಬರೋದು ಸ್ವಲ್ಪ ತಡವಾಗುತ್ತೆ, ಊಟಕ್ಕೆ ಕಾಯೋದು ಬೇಡ, ಮುಚ್ಚಿಟ್ಟರೆ ಸಾಕು''.

ಪತ್ನಿ ರಮಣಿ ಮತ್ತು ಸೋದರಳಿಯ ರವಿ ಇಬ್ಬರೂ ಇಸ್ಪೀಟ್ ಆಟದಲ್ಲಿ ಮಗ್ನರಾಗಿದ್ದರು. ಅಡುಗೆಯವರು ಸಿಕ್ಕಿದ ಅನಂತರ ರಮಣಿಯ ದಿನಚರಿಯೇ ಬದಲಾಗಿತ್ತು. ಅವಳ ದೈನಂದಿನ ಬದುಕಿನಲ್ಲಿ ಇಸ್ಪೀಟಾಟ ಪ್ರಮುಖ ಸ್ಥಾನ ಪಡೆದಿತ್ತು.

ರಮಣಿ ಗಂಡನ ಮಾತನ್ನು ಕೇಳಿಸಿದಂತೆ ತೋರಲಿಲ್ಲ. ಆಕೆ ಹುಲ್ಲಿನ ಚಾಪೆಯಲ್ಲಿ ಒಂದು ಕಾಲನ್ನು ಮಡಚಿ, ಮತ್ತೊಂದನ್ನು ಚಾಚಿ ಕುಳಿತು ತನ್ನ ಎಡಗೈನಲ್ಲಿ ಬಿಡಿಸಿದ ಇಸ್ಪೀಟ್ ಎಲೆಗಳನ್ನು ಕಂಡು ಮುಗುಳುನಗು ಚೆಲ್ಲಿದಳು.

''ರಮಣಿಯಕ್ಕ ಏಕೆ ನಗ್ತಾ ಇದೀರಿ'' ರವಿ ಕೇಳಿದ. ಅದಕ್ಕೆ ಉತ್ತರವಾಗಿ ಅವಳು ಮತ್ತೊಮ್ಮೆ ನಕ್ಕು, ಅನಂತರ ಇಬ್ಬರೂ ಗಟ್ಟಿಯಾಗಿ ನಕ್ಕರು. ರಾಮನ್‌ಕುಟ್ಟಿ ನಾಯರ್ ಹೆಗಲ ಮೇಲಿರಿಸಿದ ತುಂಡು ಪಂಚೆಯನ್ನು ಎತ್ತಿ ಕೊಡವಿಕೊಂಡರು. ಅವರು ಗೇಟನ್ನು ತೆರೆದು ಮುಚ್ಚಿ ನಡೆಯತೊಡಗಿದರು. ಗೇಟಿನ ಬಳಿಯಲ್ಲಿಯೇ ಇದ್ದ ಭತ್ತದ ಪೈರು ನೆರಳಿನಲ್ಲಿ ಗಾಳಿಗೆ ವಾಲಾಡುತ್ತಿತ್ತು. ಗದ್ದೆಯ ನಡುವಿನಿಂದ ನಡೆಯುತ್ತಿರುವಾಗ ರಾಮನ್ ಕುಟ್ಟಿ ನಾಯರರನ್ನು ಬಲಗಡೆ ಪಾದದ ಆಣಿ ರೋಗ ಕಾಡಿತು.

ಪೊನ್ನಾನಿಯ ಸಮೀಪ ಆಣಿ ರೋಗವನ್ನು ಗುಣಪಡಿಸುವ ಸಿದ್ಧ ವೈದ್ಯರೊಬ್ಬರು ಇದ್ದಾರೆಂದು ರಾಮನ ಕುಟ್ಟಿ ನಾಯರ್‌ಗೆ ಗೊತ್ತಿತ್ತು. ಎಲ್ಲಾ ಕೆಲಸಗಳು ಮುಗಿದ ಮೇಲೆ ಪೋನ್ನಾನಿಗೆ ಹೋಗಿ ಕಾಯಿಲೆ ವಾಸಿ ಮಾಡಿಸಿಕೊಳ್ಳಬೇಕು. ಅವರು ತಮ್ಮಷ್ಟಕ್ಕೆ ಹೇಳಿಕೊಂಡರು. ಈ ಸಲ ಜಯ ಎಂಬ ಭತ್ತದ ಬೀಜವನ್ನೇ ತನ್ನ ಗದ್ದೆಯಲ್ಲಿ ಬಿತ್ತಬೇಕೆಂದು ಮೊದಲೇ ನಿರ್ಧರಿಸಲಾಗಿತ್ತು. ಅದು ಕೂಡ ರಮಣಿಯ ಬಯಕೆಯಾಗಿತ್ತು. ಅವಳಿಗೆ ಬಿರಿಯಾನಿ ಅನ್ನ ಊಟ ಮಾಡುವ ಮೋಹ. ಉಳಿದ ಪದಾರ್ಥಗಳನ್ನೆಲ್ಲಾ ತಿಂದು ತಿಂದು ಅವಳಿಗೆ ಸಾಕೆನಿಸಿತ್ತು. ಅದಕ್ಕೆ ಬಹುಶಃ ರವಿಯ ಬಲವಂತವೂ ಕಾರಣವಿರಬಹುದು. ಅವನು ನಗರದಲ್ಲಿ ಬೆಳೆದವನಲ್ಲವೆ? ತನ್ನ ಸೋದರಿಯ ಗಂಡನಿಗೆ ಎತ್ತಿಕೊಳ್ಳಲಾಗದಷ್ಟು ಪ್ರಾರಬ್ಧಗಳು ಇವೆ. ಆದರೂ ವೇಷಭೂಷಣಗಳಿಗಾಗಿ ಅವನು ಧಾರಾಳವಾಗಿ ಹಣ ಖರ್ಚು ಮಾಡುತ್ತಾನೆ. ಅವನ ದುಂದುವೆಚ್ಚದ ಒಂದು ಅಂಶವನ್ನು ರವಿಯ ನಡವಳಿಕೆಯಲ್ಲಿ ಕಾಣಬಹುದಿತ್ತು. ಅವನು ಸೇದುವುದು ಬೆಲೆಬಾಳುವ ಸಿಗರೇಟು, ಕೆಲಸವೇ ಇಲ್ಲದ ಯುವಕ ಅಧಿಕ ಬೆಲೆಯ ಸಿಗರೇಟು ಸೇದುವುದು, ರೇಷ್ಮೆ ಬಟ್ಟೆಗಳನ್ನು ಉಡುವುದು, ಕಾದಂಬರಿಗಳನ್ನು ಕೊಂಡು ಓದುವುದು, ಮುಂತಾದ ಅಭ್ಯಾಸಗಳ ದಾಸನಾದರೆ, ಹೇಗೆ ಅವನು ಸುರಕ್ಷಿತವಾದ ಭವಿಷ್ಯ ರೂಪಿಸಿಕೊಳ್ಳಬಲ್ಲ? ಅವನ ಜೀವನ ಪಯಣದಲ್ಲಿ ಒಬ್ಬ ಮಾವ, ಓರ್ವ ಅತ್ತೆ ಎಷ್ಟು ಕಾಲ ಇರುತ್ತಾರೆ. ತಾನು ಎಷ್ಟೋ ಸಲ ರಮಣಿಗೆ ಹೇಳಿದ್ದುಂಟು–ರವಿಯನ್ನು ಮುದ್ದು ಮಾಡಿ ಹಾಳು ಮಾಡಬಾರದೆಂದು. ಆದರೂ ಮಕ್ಕಳಿಲ್ಲದ ರಮಣಿ, ರವಿಗೆ ಇಷ್ಟವಾದ ತಿಂಡಿಗಳನ್ನು ಮಾಡಿಕೊಟ್ಟು ಖರ್ಚಿಗೆ ಹಣವನ್ನು ಕೊಡುತ್ತಿದ್ದಳು. ಊರಿಗೆ ಬಂದ ಹೊಸತರಲ್ಲಿ ಅವನು ಹೇಳುತ್ತಿದ್ದ, ಮಾವ ನನ್ನ ಆರೋಗ್ಯ ಸುಧಾರಿಸಬೇಕೆಂದರೆ ನಾನು ಯಾವುದಾದರೂ ಬ್ಯಾಂಕಿನಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬೇಕು. ಅಲ್ಲಿ ನನಗೇನಾದರೂ ಕೆಲಸ ಸಿಗುತ್ತದೆಯೋ ಎಂದು ವಿಚಾರಿಸಬೇಕು. ಕೊನೆ ಕೊನೆಗೆ ಕೆಲಸದ ಬಗ್ಗೆ ರವಿ ಮಾತನಾಡುವುದನ್ನೇ ಬಿಟ್ಟುಬಿಟ್ಟ. ಆದರೆ, ಆರೋಗ್ಯ ಸುಧಾರಿಸುತ್ತಾ ಬಂತು. ಅವನ ಪ್ರಮುಖ ಉದ್ಯೋಗವೇ ಇಸ್ಪೀಟ್ ಆಟವಾಗಿ ಬದಲಾಯಿತು. ಆ ಆಟದ ಆನಂದದಲ್ಲಿ ರಮಣಿ ಹುಚ್ಚಳಾದಳು. ಮಕ್ಕಳಿಲ್ಲದ ಕೊರತೆಯನ್ನು ಇಸ್ಪೀಟ್ ಆಟದಲ್ಲಿ ಮರೆಯುತ್ತಿದ್ದಾಳೆಂದು ತಾನೂ ಅವಳಿಗೆ ಬುದ್ಧಿಹೇಳಲು ಮುಂದಾಗಲಿಲ್ಲ. ಈಗ ಊರವರು ಕೂಡ ರಮಣಿಯನ್ನು 'ಇಸ್ಪೀಟ್ ರಾಣಿ'ಯೆಂದು ಕರೆದು ಅಪಹಾಸ್ಯ ಮಾಡುತ್ತಿದ್ದಾರೆ.

ಕುನ್ನಂಕುಳಂನಲ್ಲಿ ಬಸ್ಸಿಳಿದಾಗ ಟ್ಯಾಕ್ಸಿಯ ಗೋಪಿ ನಗುತ್ತಾ ಬಳಿಗೆ ಬಂದು, ''ಎಲ್ಲಿಗೆ ರಾಮನ್ ಕುಟ್ಟಿ